6

# ದೇವರಲ್ಲಿ ಅಭಿವೃದ್ಧಿ ಹೊಂದುವದು

## (1 ಥೆಸಲೋನೀಕ 3:9-13)

ಥೆಸಲೊನೀಕದವರ ಕುರಿತಾದ ವರ್ತಮಾನವು ಅಥೇನೆಯಲ್ಲಿದ್ದ ಪೌಲನಿಗೆ ಆನಂದವನ್ನು ಉಂಟುಮಾಡಿತು. ಹಿಂಸೆಗೆ ಒಳಗಾದ ಕ್ರೈಸ್ತರ ಕುರಿತಾಗಿ ಪೌಲನು ಬಹು ಚಿಂತನೆಯನ್ನು ಮಾಡುತ್ತಿದ್ದನು. ಆ ಥೆಸಲೊನೀಕದ ಹೊಸ ಕ್ರೈಸ್ತರ ಸಂಗಡ ಸಮಯವನ್ನು ಕಳೆದು, ಪೌಲನ ಬಳಿಗೆ ಹಿಂದಿರುಗಿದ ತಿಮೊಥೆಯನ ಮೂಲಕ ತಿಳುಕೊಂಡ ವರ್ತಮಾನವು ಪೌಲನ ಆಳವಾದ ಚಿಂತನೆಯನ್ನು ಶಮನಮಾಡಿತು.

ಪೌಲನ ಪ್ರತಿಕ್ರಿಯೆ ಏನಾಯಿತು? ಪೌಲನು ಕೃತಜ್ಞನಾಗಿದ್ದು ಮತ್ತು ಅವರಿಗೆ ವಂದನೆಯನ್ನು ಸಲ್ಲಿಸಿ, ವೃದ್ಧಿಗೊಳ್ಳುತ್ತಿದ್ದ ಹೊಸ ಕ್ರೈಸ್ತರ ಭವಿಷ್ಯತ್ತಿಗೆ ಸಹಾಯ ಮಾಡಲು ಯತ್ನಿಸಿದನು. ದೇವರು ಅವರನ್ನು ಪೋಷಿಸಿ, ಅವರನ್ನು ಸದಾಕಾಲದ ಪರಿಪಕ್ವತೆಗೆ ನಡೆಸಲಿ ಎಂದು ಬಯಸಿದನು. ಅವನು ಈ ಉದ್ದೇಶಗಳ ಕುರಿತು ಯೋಚನೆ ಮಾತ್ರ ಮಾಡದೆ, ಅದಕ್ಕಾಗಿ ದೇವರಲ್ಲಿ ಪ್ರಾರ್ಥಿಸಿದನು. ಥೆಸಲೊನೀಕದವರು ಈ ಪ್ರಾರ್ಥನೆಯ ಕುರಿತು ಅರಿತು, ಉತ್ತೇಜನ ಹೊಂದಬೇಕೆಂದು ಬಯಸಿದನು.

ಈ ಮೊದಲ ಶತಮಾನದ ಕ್ರೈಸ್ತರ ಮಾದರಿಯನ್ನು ಗಮನಿಸುವಾಗ, ನಮ್ಮ ಜೊತೆ ಕ್ರೈಸ್ತರ ಕುರಿತಾಗಿರುವ ಯೋಚನೆಯನ್ನು ಪೌಲನ ಯೋಚನೆಯೊಂದಿಗೆ ಹೋಲಿಸಬಹುದು. ಇತರರನ್ನು ವೃದ್ಧಿಗೊಳಿಸುವಂತ ಕ್ರೈಸ್ತ ಜೀವಿತವನ್ನು ಯಾವ ರೀತಿಯಲ್ಲಿ ಜೀವಿಸಬಹುದು?

### ಕೃತಜ್ಞತಾ ಪ್ರಾರ್ಥನೆಯನ್ನು ಸಲ್ಲಿಸಿರಿ (3:9, 10ಎ)

ಥೆಸಲೊನೀಕದವರಲ್ಲಿ ಇದ್ದಂತ ನಂಬಿಕೆ ಹಾಗೂ ಪ್ರೀತಿಯ ಶುಭಸಮಾಚಾರವು ಪೌಲನ ಕೃತಜ್ಞತೆಯಲ್ಲಿ, ಅವನಿಗೆ ಮಾತು ಬಾರದಂತೆ ಮಾಡಿತು. ಆ ಎಳೇ ಪ್ರಾಯದ ಕ್ರೈಸ್ತರ ಜೀವದಿಂದ ಬೆಳೆಯುತ್ತಿದ್ದದ್ದರಿಂದ, ಪೌಲನಿಗೆ ಅತಿ ಆನಂದವುಂಟಾಯಿತು: "ನಿಮ್ಮ ನಿಮಿತ್ತ ನಮ್ಮ ದೇವರ ಮುಂದೆ ನಮಗಿರುವ ಎಲ್ಲಾ ಸಂತೋಷಕ್ಕಾಗಿ ದೇವರಿಗೆ ತಕ್ಕಷ್ಟು ಸ್ತೋತ್ರ ಮಾಡುವದು ನಮ್ಮಿಂದ ಹೇಗಾದೀತು" (3:9).

ಯಾವ ಪಟ್ಟಣದಲ್ಲಿ ಜನರು ದೇವರ ನಿಯಾಮಾವಳಿಗಳನ್ನು ಹಾಗೂ ಸತ್ಯವನ್ನು ಅನುಸರಿಸಲ್ಲಿಲ್ಲವೋ, ಅಂಥ ಪಟ್ಟಣದಲ್ಲಿ ವಾಸಿಸಿದ್ದ ಈ ಚಿಕ್ಕ ಕ್ರೈಸ್ತ ಗುಂಪಿನ ಬಗೆ ಪೌಲನು ಕಾಳಜಿಯನ್ನು ವಹಿಸಿದನು. ಇದರ ಸಂಗಡ, ಈ ಹೊಸ ಧರ್ಮವನ್ನು ಅಂಗೀಕರಿಸಿದ ಕುಟುಂಬಗಳವರು, ಮತ್ತು ಸಮೂಹದ ಇತರರು, ಇದರ ನಿಮಿತ್ತವಾಗಿ, ಸ್ನೇಹವನ್ನಾಗಲೀ, ಉದ್ಯೋಗವನ್ನಾಗಲೀ, ಅಥವಾ ನಾಗರೀಕರ ಹಕ್ಕುಗಳನ್ನಾಗಲೀ ಹೊಂದಲು ಅನರ್ಹರಾದರು. ಇಂಥ ಸ್ಥಿತಿಯಲ್ಲಿಯೂ ಅವರುಗಳು ನಂಬಿಗಸ್ತರಾಗಿರುವದನ್ನು ಪೌಲನು ಕಂಡು ನಿರಾಳನಾದನು. ಅವರು ಬಲವಾಗಿ ನಿಲ್ಲಲು ಕಾರಣವೇನು? ಅವರು ದೇವರಿಗೆ ಸಮರ್ಪಿಸಿಕೊಂಡಿದ್ದರು, ಅವರ ನಂಬಿಕೆಗೆ ಸಹೋದರರಲ್ಲಿಟ್ಟಿದ್ದ ಪ್ರೀತಿಯ ಉತ್ತೇಜನವೇ ಕಾರಣವಾಯಿತು.

ನಮ್ಮ ಜೀವಿತದಲ್ಲೂ ಹಾಗೂ ಇತರರ ಜೀವಿತದಲ್ಲೂ ದೇವರು ನೀಡಿರುವ ಆಶೀರ್ವಾದಗಳಿಗಾಗಿ ಕೃತಜ್ಞತೆಯನ್ನು ಸಲ್ಲಿಸಲು ಕೆಲವು ಸಾರಿ ಪದಗಳು ದೊರೆಯುವದಿಲ್ಲ, ಹೇಗಿದ್ದರೂ ನಾವುಗಳು ಎಡೆಬಿಡದೇ ಪ್ರಾರ್ಥಿಸಬೇಕು: "ಎಲ್ಲಾದರಲ್ಲಿಯೂ ಕೃತಜ್ಞತಾಸ್ತುತಿ

ಮಾಡಬೇಕು; ಇದೇ ನಿಮ್ಮ ವಿಷಯವಾಗಿ ಕ್ರಿಸ್ತಯೇಸುವಿನಲ್ಲಿ ತೋರಿಬಂದ ದೇವರ ಚಿತ್ತವಾಗಿದೆ'' (5:17, 18). ನಮ್ಮ ಹೃದಯದಿಂದ ಕೃತಜ್ಞತಾ ಪ್ರಾರ್ಥನೆಯು ಹರಿಯಬೇಕೆಂದು ದೇವರು ಬಯಸುತ್ತಾನೆ!

## ಭವಿಷ್ಯತ್ತಿನ ಅಭಿವೃದ್ಧಿಗಾಗಿ ಯೋಜನೆಯನ್ನು ಮಾಡಿಕೊಳ್ಳಿರಿ (3:10ಬಿ)

ಥೆಸಲೊನೀಕದವರ ನಂಬಿಗಸ್ತಿಕೆಗಾಗಿಯೂ ಮತ್ತು ಅವರ ಏಳಿಗೆಗಾಗಿಯೂ ಪೌಲನು ಸಂತೋಷದಿಂದ ಪ್ರಾರ್ಥಿಸಿದನು, ಆದಾಗ್ಯೂ ಅವರ ಭವಿಷ್ಯತ್ತಿನ ಬೆಳವಣಿಗೆಗಾಗಿ ಆಳವಾದ ಆಸಕ್ತಿಯನ್ನು ಹೊಂದಿದ್ದನು. ಈ ಕಾರಣದಿಂದ, ಥೆಸಲೊನೀಕದವರ ಭವಿಷ್ಯತ್ತಿನ ಕೊರತೆಗಳನ್ನು "ನೀಗುವದಕ್ಕೂ" ಅನುಕೂಲವಾಗಬೇಕೆಂದು ದೇವರನ್ನು ಅತ್ಯಂತವಾಗಿ ಬೇಡುವವನಾಗಿದ್ದನು (3:10ಬಿ).

ಕ್ರೈಸ್ತರ ಪ್ರಗತಿಗಾಗಿ ನಾವುಗಳು ಯೋಜನೆಯನ್ನು ನಮಗೋಸ್ಕರವಾಗಿಯೂ ಹಾಗೂ ಇತರರಿಗಾಗಿಯೂ ಯೋಜನೆಯನ್ನು ಮಾಡಬೇಕು. ವರ್ತಮಾನ ಕಾಲದಲ್ಲಿರುವ ಸಾಮರ್ಥ್ಯ ಹಾಗೂ ಗುಣಧರ್ಮದ ಬಗ್ಗೆ ತುಲನೆ ಮಾಡಿ, ಅಭಿವೃದ್ಧಿಯನ್ನು ಮುಂದುವರಿಸುವದಕ್ಕೆ ದೇವರ ವಾಕ್ಯದಿಂದ ನಿರ್ಣಯವನ್ನು ಮಾಡಬಹುದು. ಈ ಪತ್ರವನ್ನು ಬರೆಯುವ ಸಂದರ್ಭದಲ್ಲಿ ವೈಯಕ್ತಿಕವಾದ ಸಂಧಿಸುವಿಕೆಯು ಅಸಾಧ್ಯವಾಗಿತ್ತು; ಅವರು ಅವರನ್ನು ಸಂಧಿಸುವವರಿಗೆ ಈ ಪತ್ರಿಕೆಯು ಥೆಸಲೊನೀಕದ ಕ್ರೈಸ್ತರಿಗೆ ಸಹಾಯಕವಾಗಿತ್ತು. ಉಳಿದ ಈ ಪತ್ರಿಕೆಯ ಭಾಗದಲ್ಲೂ ಮತ್ತು ಎರಡನೇಯ ಥೆಸಲೊನೀಕವಾಗಿತ್ತು. ಆ ಕ್ರೈಸ್ತರಲ್ಲಿದ್ದ ಕೊರತೆಗಳ ಬಗ್ಗೆ ದೃಷ್ಟಿಯನ್ನು ಬೀರಲಾಗಿದೆ.

## ನಿಮ್ಮ ಜೀವಿತದಲ್ಲಿ ದೇವರ ಚಿತ್ತವೇ ಆಡಳಿತ ನಡೆಸಲಿ (3:11)

ಪೌಲನು ಆ ಸಹೋದರರ ಜೊತೆಯಲ್ಲಿರುವದಕ್ಕೆ ಆಶೆಪಟ್ಟರೂ, ಈ ವಿಷಯವಾಗಿ ದೇವರೇ ಮಾರ್ಗದರ್ಶನ ನೀಡಲೆಂದು ಆಲೋಚಿಸಿದನು: "ನಮ್ಮ ತಂದೆಯಾದ ದೇವರೂ ನಮ್ಮ ಕರ್ತನಾದ ಯೇಸುವೂ, ನಮಗೆ ನಿಮ್ಮ ಬಳಿಗೆ ಬರುವದಕ್ಕೆ ಮಾರ್ಗವನ್ನು ಸರಾಗ ಮಾಡಲಿ'' (3:11). ದೇವರ ಸೇವೆಯ ಇತರೇ ಅವಕಾಶಗಳು ಥೆಸಲೊನೀಕವನ್ನು ಸಂಧಿಸದಂತೆ ತಡೆ ಉಂಟುಮಾಡಿರಬಹುದು, ಆದರೆ ಅವನು ದೇವರ ಚಿತ್ತಕ್ಕೆ ಅನುಗುಣವಾಗಿ ನಡೆದುಕೊಂಡನು.

ಇದೇ ರೀತಿಯಲ್ಲಿ, ನಮ್ಮ ಯೋಜನೆಗಳು ಸಹ ದೇವರ ಚಿತ್ತಕ್ಕೆ ಅನುಗುಣವಾಗಿರಬೇಕೆ ವಿನಃ ನಮ್ಮ ಸ್ವಂತ ಉದ್ದೇಶಗಳಂತಿರಬಾರದು. ಯಾಕೋಬ 4:15ರಂತೆ "ಆದುದರಿಂದ ನೀವು ಅಂತ ಮಾತನ್ನು ಬಿಟ್ಟು ದೇವರ ಚಿತ್ತವಾದರೆ ನಾವು ಬದುಕಿ ಈ ಕೆಲಸವನ್ನಾಗಲಿ ಆ ಕೆಲಸವನ್ನಾಗಲಿ ಮಾಡುವೆವು ಎಂದು ಹೇಳಬೇಕು.'' ನಾವು ಆಲೋಚಿಸಿ, ಪ್ರಾರ್ಥಿಸಿ, ಮಾತನಾಡಿ, ಇವೆಲ್ಲದರಲ್ಲೂ ದೇವರ ಚಿತ್ತ ನೇರವೇರುವಂತೆ ಕ್ರಿಯಾಶೀಲರಾಗಬೇಕು. ನಾವು ಅದನ್ನು ಮಾಡೋಣವೇ? ಮತ್ತೆ ಪ್ರಯತ್ನಿಸೋಣ!

## ಪ್ರೀತಿ, ಪ್ರೀತಿ, ಪ್ರೀತಿ (3:12)

ಈ ಕ್ರೈಸ್ತರಲ್ಲಿ ಪ್ರೀತಿಯು ಒಳಗೊಂಡಿತ್ತು ಎಂದು ಹೇಳಲಾಗಿದೆ. ಅವರು ಪ್ರೀತಿಯಿಂದ ತುಂಬಿಸಲ್ಪಡಲಿ ಎಂದು ಪ್ರಾರ್ಥಿಸಿ ಮತ್ತು ಅವರು ಪ್ರೀತಿಯಲ್ಲಿ ಸಮದ್ಧಿಯಾಗಿರಬೇಕೆಂದು ಬಯಸಿದನು! ಅವರಲ್ಲಿದ್ದ ಪ್ರೀತಿಯ ವರ್ತಮಾನವು ಅವರಿಗೆ ಆನಂದವನ್ನು ಮತ್ತು ಆದರಣೆಯನ್ನು ನೀಡಿತೆಂದು ಹೇಳಿದನು (3:6, 7). ಅವರು ಪ್ರೀತಿಯಲ್ಲಿ ಪ್ರಬುದ್ಧರಾಗಿದ್ದರೆಂದು ತಿಳಿಸಿದನು (4:9, 10). ಆದಾಗ್ಯೂ, ಹೊಸ ಕ್ರೈಸ್ತರು ಪ್ರೀತಿಯಲ್ಲಿ ಅಭಿವೃದ್ಧಿಹೊಂದಿ ಅತ್ಯಧಿಕವಾಗುವಂತೆ ಪ್ರಾರ್ಥಿಸಿದನು (3:12). ಪ್ರೀತಿಯು ಕ್ರೈಸ್ತ ಜೀವಿತದ ಮುಖ್ಯ ಸಂಗತಿಯಾಗಿರುತ್ತದೆ!

ಪ್ರೀತಿಗೆ ಬದಲಾಗಿ ಇನ್ನಾವುದು ಇರುವದಿಲ್ಲ!

ಹೊಸ ಒಡಂಬಡಿಕೆಯು ದೇವರ ಪ್ರೀತಿ ಕುರಿತಾಗಿ ಒತ್ತಿ ಹೇಳುತ್ತದೆ, ಮತ್ತು ದೇವ ಜನರು ದೇವ ಪ್ರೀತಿಯನ್ನು ಪ್ರತಿಬಿಂಬಿಸಬೇಕೆಂದು ಉಪದೇಶಿಸುತ್ತದೆ. ಯೋಹಾನನು ಬರೆದು, "ದೇವರು ಪ್ರೀತಿ ಸ್ವರೂಪಿ; ಪ್ರೀತಿಯಲ್ಲಿ ನೆಲೆಗೊಂಡಿರುವವನು ದೇವರಲ್ಲಿ ನೆಲೆಗೊಂಡಿದ್ದಾನೆ, ದೇವರು ಅವನಲ್ಲಿ ನೆಲೆಗೊಂಡಿದ್ದಾನೆ" (1 ಯೋಹಾನ 4:16ಬಿ). ಕ್ರಿಸ್ತನಲ್ಲಿದ್ದಂತ ಪ್ರೀತಿಯು ಅವನ ಅನುಯಾಯಿಗಳಾಗಿರಬೇಕೆಂದು ಯೇಸು ಸರಳೀಕರಿಸಿರುವನು: "ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ: ಏನೇಂದರೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು; ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಸಹ ಒಬ್ಬರನ್ನೊಬ್ಬರು ಪ್ರೀತಿಸಬೇಕು" (ಯೋಹಾನ 13:34, 35).

ದೇವರ ಮತ್ತು ಕ್ರಿಸ್ತನ ಪ್ರೀತಿಯನ್ನು ದೇವ ಜನರಲ್ಲಿ ಪ್ರತಿಬಿಂಬಿಸುವದನ್ನು ನಾವುಗಳು ಅಧ್ಯಯನ ಮಾಡಿ ಮತ್ತು ಅಳವಡಿಸಿಕೊಳ್ಳುವಂತದ್ದೇ ನಮ್ಮ ಜೀವಿತದ ಮುಖ್ಯ ಧ್ಯೇಯವಾಗಿರುತ್ತದೆ! ಕ್ರೈಸ್ತರಿಗೆ ಇದನ್ನು ಗುಣಗಳ ಮೂಲಪಾಠವಾಗಿ ಬೋಧಿಸಬೇಕು. ಪ್ರತಿಯೊಬ್ಬ ಕ್ರೈಸ್ತನು ಪ್ರೀತಿಯಲ್ಲಿ ವೃದ್ಧಿಹೊಂದಿ ಕ್ರಿಸ್ತನಂತೆ ಪ್ರಗತಿಪರರಾಗಬೇಕು. ನಮ್ಮಲ್ಲಿರುವ ಪ್ರೀತಿಯನ್ನು ನಮ್ಮ ಸುತ್ತಲಿರುವ ಸಹೋದರ ಸಹೋದರಿಯರು ಅನುಭವಿಸಬೇಕು ಮತ್ತು ನಮ್ಮ ಸಹವಾಸದಲ್ಲಿರುವ ಅ - ಕ್ರೈಸ್ತರು, ಅದನ್ನು ನೋಡಬೇಕು.

## ನಿರ್ಮಲ ಹೃದಯವುಳ್ಳವರಾಗಿರ್ರಿ (3:13)

ಹಿಂದಿನ ವಚನದಲ್ಲಿರುವ ಪ್ರೀತಿಯ ಸಮೃದ್ಧಿಯ ಕುರಿತಾಗಿ ವಚನ 13ರಲ್ಲಿ ಮುಂದುವರಿಸಲಾಗಿದೆ. ದೇವರ ಪ್ರೀತಿಯಿಂದ ಹೃದಯಗಳು ತುಂಬಲ್ಪಟ್ಟಿರುವಾಗ ನಮ್ಮ ಮನೋಭಾವವನ್ನು ಯಾರಾದರೂ ನಿಂದಿಸಲು ಸಾಧ್ಯವಿಲ್ಲ, ಯಾಕಂದರೆ ನಾವು ದೇವರನ್ನೆ ನಮ್ಮ ಮನೋಭಾವದಲ್ಲಿ ಪ್ರಕಟಿಸುವವರಾಗಿರುತ್ತೇವೆ. "ದೇವರು ಹೃದಯಗಳನ್ನು ಪರಿಶೀಲಿಸುತ್ತಾನೆ" ಎಂಬುದನ್ನು ಕ್ರೈಸ್ತರು ಈ ಮೊದಲೇ ತಿಳಿದಿದ್ದರು (2:4). ನಾವುಗಳು ಒಳ್ಳೇಯ ಕ್ರಿಯೆಗಳನ್ನು ಅಲಕ್ಷ್ಯ ಮಾಡಿ ತಪ್ಪೆಸಗಬಹುದು, ಅದು ಕ್ಷಮಾಪಣೆಗೆ ಒಳಪಟ್ಟರೂ, ನಮ್ಮ ಹೃದಯಗಳು ಪ್ರೀತಿಯಿಂದ ತುಂಬಿರಬೇಕೆಂದು ದೇವರು ಬಯಸುತ್ತಾನೆ. "ನಮ್ಮ ಕರ್ತನಾದ ಯೇಸು ನಿಮ್ಮ ಹೃದಯಗಳನ್ನು ದೃಢಪಡಿಸಿ ತನ್ನ ಎಲ್ಲಾ ಪರಿಶುದ್ಧ ಪರಿವಾರ ಸಮೇತ ಪ್ರತ್ಯಕ್ಷನಾದಾಗ ತಂದೆಯಾದ ದೇವರ ಸಮಕ್ಷಮದಲ್ಲಿ ನೀವು ಪರಿಶುದ್ಧರೂ, ನಿರ್ದೋಷಿಗಳಾಗಿರುವಂತೆ ಮಾಡಲಿ."

ಯೇಸುವಿನ ಬರೋಣಕ್ಕಾಗಿ ಥೆಸಲೊನೀಕದವರು ಯಾವ ವಿಧದಲ್ಲಿ ಸಿದ್ಧರಾಗುತ್ತಿದ್ದರು? ಇದೊಂದು ಪ್ರಾಮುಖ್ಯವಾದ ಪ್ರಶ್ನೆ! ಯೇಸುವಿನ ಬರೋಣಕ್ಕಾಗಿ ಸಿದ್ಧರಾಗುವದು ಕ್ರೈಸ್ತ ಜೀವಿತದ ಒಂದು ಅವಿಭಾಜ್ಯ ಅಂಗವಾಗಿರುತ್ತದೆ (1:10). ಅದು ಕ್ರೈಸ್ತರೆಲ್ಲರೂ ಒಂದಾಗಿ ಸಂಧಿಸುವ ಭರವಸೆಯಾಗಿದೆ (2:19, 20). 3:13ರಲ್ಲಿ ತಂದೆಯಾದ ದೇವರ ಸಮಕ್ಷಮದಲ್ಲಿ, ದೇವಜನರೆಲ್ಲರು ನಿರ್ದೋಷಿಗಳಾಗಿ ಕಾಣಿಸಿ ಕೊಳ್ಳುವ ಚಿತ್ರಣವನ್ನು ನೀಡಲಾಗಿದೆ (3:13).

ನಮ್ಮ ಸ್ವಂತ ನೀತಿಯಿಂದ ನಾವುಗಳು ಪರಿಶುದ್ಧರಾಗುವದು ಅಸಾಧ್ಯ ಎಂಬ ಅರಿವಿಕೆಯಿದೆ, "ಯಾಕಂದರೆ ಎಲ್ಲರೂ ಪಾಪಮಾಡಿ, ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ" (ರೋಮಾಪುರ 3:23). ದೇವರು ಕೆಟ್ಟದ್ದರ ಸಂಗಡ ವಾಸಿಸುವನಲ್ಲ: "ನೀನು ದುಷ್ಟತ್ವದಲ್ಲಿ ಸಂತೋಷಿಸುವ ದೇವರಲ್ಲ; ಕೆಟ್ಟದ್ದು ನಿನ್ನ ಬಳಿ ತಂಗಲಾರದು" (ಕೀರ್ತನೆ 5:4).

ಪರಿಶುದ್ಧತೆಗಾಗಿ ದೇವರು ನೀಡಿರುವ ಯೇಸುವಿನ ಯಜ್ಞದಲ್ಲಿ ಅವಲಂಭಿತರಾಗಿರಬೇಕು: "ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿ ಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪಸ್ವರೂಪಿಯಾಗ ಮಾಡಿದನು" (2 ಕೊರಿಂಥ

5:21). ಕ್ರಿಸ್ತನ ಬರೋಣದಲ್ಲಿ, ಯೇಸುವಿನಲ್ಲಿ ಮಾತ್ರ ದೇವರೊಂದಿಗಿನ ಪರಿಶುದ್ಧತೆ ಯನ್ನು ನಮ್ಮ ಹೃದಯವು ಅನುಭವಿಸಬಹುದು. ಥೆಸಲೊನೀಕದವರನ್ನು ದೇವರು ನಿರ್ದೋಶಿ ಗಳನ್ನಾಗಿ ಮಾಡಿರುವ ಕಾರ್ಯದಲ್ಲಿ ನಾವು ಅವಲಂಭನೆ ಮಾಡಬಹುದು.

## ಮುಕ್ತಾಯ

ಇದಕ್ಕಿಂತಲೂ ಮಿಗಿಲಾದ ಬರವಣಿಗೆಯನ್ನು ಯಾರೂ ಊಹಿಸಲಾರರು; ಅವರು ತಮ್ಮ ಗತಿಸಿಹೋದ ಆಶೀರ್ವಾದಗಳಿಗಾಗಿ ವಂದನೆ ಹೇಳಿದರು, ಅವರ ಪುನಃ ಸೇರುವಿಕೆಗಾಗಿ, ಪ್ರತ್ಯೇಕಗೊಂಡವರನ್ನು ಭವಿಷ್ಯತ್ತಿನಲ್ಲಿ ಸಂಧಿಸಲು ವಂಧಿಸಿದರು! ನಾವು ಈ ಆಲೋ ಚನೆಗಳನ್ನು ಗ್ರಹಿಸಿ, ನಾವು ಯಾರಿಂದ ದೂರವಾಗಿದ್ದೇವ್ರೋ, ಅವರ ಜೊತೆಯಲ್ಲಿ ಪುನಃ ಸೇರಿಕೊಳ್ಳುವ ವಿಷಯಕ್ಕೆ ಅನ್ವಯಿಸಿಕೊಂಡರೆ, ಈ ವಿಷಯದಿಂದ ಅವರಿಗೂ ಮತ್ತು ನಮಗೂ ಆದಾಯವಾಗುತ್ತದೆ.

3:9-13ರ ವಾಕ್ಯವನ್ನು ನಿಧಾನವಾಗಿ ಓದಿರಿ. ಈ ವಚನಗಳನ್ನು ಎಚ್ಚರದಿಂದ ಗಮನಿಸಿರಿ, ನಿಮ್ಮ ಪ್ರಾರ್ಥನೆಗಳಲ್ಲಿ ಇವುಗಳನ್ನು ಅನ್ವಯಿಸಿಕೊಳ್ಳಿರಿ. ನಿಮ್ಮ ಸಹೋದರರಿಗಾಗಿ ನಿಮ್ಮಲ್ಲಿರುವ ಚಿಂತನೆಯು ಪ್ರಕಟಗೊಳ್ಳಲಿ! ಇದು ಒಂದು ವ್ಯತ್ಯಾಸವನ್ನು ಉಂಟುಮಾಡುತ್ತದೆ! ಅದು ಹೃದಯಗಳನ್ನು ಚಲಿಸಿ, ಮನೋಭಾವಗಳನ್ನು ಬದಲಿಸುತ್ತದೆ, ಅದು ನೀತಿಯ ಕಾರ್ಯಗಳನ್ನು ಉತ್ಪಾದನೆ ಮಾಡುತ್ತದೆ, ಅದು ಸಹೋದರರು ವೃದ್ಧಿ ಹೊಂದಿ ನಂಬಿಗಸ್ತರಾಗಿ ರುವದಕ್ಕೆ ಸಹಾಯಿಸುತ್ತದೆ.